

ಅಕ್ಷತಾ ಹುಂಚದಕಟ್ಟೆ
ಕಲೆ: ವಿಶ್ವನಾಥ್ ಎ.ಎಸ್.

# ಲಂಕೇಶರ ಕಥೆಯ ಇಬ್ಬರು ಹುಡುಗೀರು

## 'ಕಣ್ಮರೆ' ಕಥೆಯ ಸಾವಿತ್ರಿ ಮತ್ತು ಭ್ರಮರಾಂಬ

ಭಿನ್ನಭಾವದ ಇಬ್ಬರು ಹುಡುಗಿಯರು ನಚ್ಚುಗೆಯ ಗೆಳತಿಯರಾಗುವುದು ಈ ಜಗದಲ್ಲಿ ಸರ್ವೆ ಸಾಮಾನ್ಯ ಸಂಗತಿ. ವಾಚಾಳಿಗೆ ಮೌನದೇವತೆ, ಸದಾ ಹಸನ್ಮುಖಿಗೆ ಮಂದಸ್ಮಿತೆ ಅಥವಾ ಗಜಗಂಭೀರೆ, ಆಕಾಶಕ್ಕೆ ಏಣಿ ಹಾಕುವ ಮಹತ್ವಾಕಾಂಕ್ಷಿಗೆ ನಿಂತ ನೆಲದಲ್ಲೇ ಬೇರುಬಿಟ್ಟ ಸದಾ ಸಂತೃಪ್ತೆ, ಸೌಂದರ್ಯಸಾಧನಗಳ ಮೋಹಿತೆಗೆ ಸರಳತೆಯೇ ಮೈವೆತ್ತ ಮೂರ್ತಿ, ಸಣ್ಣಪುಟ್ಟ ಸಂಗತಿಗಳಿಗೂ ಗೊಂದಲಗೊಳ್ಳುವ ಮನಸಿಗೆ ಎಲ್ಲದರಲ್ಲೂ ಸ್ಪಷ್ಟತೆಯ ಚಿತ್ತದವಳು ಹೀಗೆ. ಲಂಕೇಶರ 'ಕಣ್ಮರೆ' ಕಥೆಯ ಪಾತ್ರಗಳಾದ ಸಾವಿತ್ರಿ ಮತ್ತು ಭ್ರಮರಾಂಬ ಭಿನ್ನಭಾವದ ಇಬ್ಬರು ಹುಡುಗಿಯರು. ವಿರುದ್ಧ ದಿಕ್ಕಿನಲ್ಲಿ ಯೋಚಿಸುವ ಈ ಇಬ್ಬರು ಹುಡುಗೀರ ಬದುಕಿನ ಕಥೆ ನನ್ನನ್ನು ಆವರಿಸಿಕೊಂಡಿದೆ.

ಈ ಕಥೆಯು ಭಿನ್ನ ದಾರಿಯಲ್ಲಿ ನಡೆಯುತ್ತಿದ್ದಂತೆ ಕಂಡರೂ, ಕಥೆಯೋದಿ ಮುಗಿದ ಬಳಿಕ ಮನದೊಳಗೆ ಇಬ್ಬರದ್ದೂ ಒಂದೇ ರೀತಿಯ ಬಾಳಾಯಿತಲ್ಲಾ... ಎಂದು ಅನಿಸದೇ ಇರದು. ನಚ್ಚುಗೆಯ ಇಬ್ಬರು ಹುಡುಗಿಯರು ಗೆಳತಿಯರಾಗುವುದು ಈ ಜಗದಲ್ಲಿ ಸರ್ವೆ ಸಾಮಾನ್ಯ ಸಂಗತಿ. ಆದರೆ ಇವರಿಬ್ಬರು ಭಿನ್ನ ಅಭಿರುಚಿಗಳ ಹುಡುಗಿಯರು. ಅವರಿಬ್ಬರ ಒಳ್ಳೆಯತನ, ಬದುಕನ್ನು ಇಡಿಯಾಗಿ ಪ್ರೀತಿಸುವ ಬಗೆ, ಪರಸ್ಪರರಿಗೆ ಮಿಡಿಯುವ ಮನ, ಬೇರೆಯವರ ಬಗೆಗೆ ಇಲ್ಲಸಲ್ಲದ ಮಾತುಗಳನ್ನು ಆಡದ ಸದ್ ನಡವಳಿಕೆ ಎಲ್ಲವೂ ಅವರಿಬ್ಬರನ್ನು ನನಗಿಷ್ಟದವರನ್ನಾಗಿಸಿದೆ. ಹಾಗೆಯೇ ಸಾವಿತ್ರಿಯ ಹಿಂಜರಿಕೆ, ಗೊಂದಲಗಳು, ಭ್ರಮರಾಂಬಳ ವ್ಯವಸ್ಥಿತತೆ, ಸ್ಪಷ್ಟತೆ ಯಾವುದೂ ಬದುಕಿನ ನಾಗಾಲೋಟದಲ್ಲಿ ನೆರವಿಗೆ ಬಾರದೇ ಮತ್ತೆ ಮತ್ತೆ ಮಗುಚಿ ಬೀಳುವ ಹೆಣ್ಣಿನ ಬದುಕಿನ ಪರಿ... ಅಚ್ಚರಿ ಹುಟ್ಟಿಸುತ್ತದೆ, ನಮ್ಮ ನಿಟ್ಟುಸಿರನ್ನು ಚೆಲ್ಲಿಸುತ್ತದೆ... ಎಷ್ಟೋ ಬಾರಿ ಸಾವಿತ್ರಿ ಮತ್ತು ಭ್ರಮರಾಂಬರ ಬದುಕಿನ ನಡಿಗೆಯಲ್ಲಿ ನಾನು ಮತ್ತು ನನ್ನಂತಹ ಎಷ್ಟೋ ಕೆಳಮಧ್ಯಮವರ್ಗದ, ಹಳ್ಳಿಯ ಹಿನ್ನಲೆಯ, ಪದವಿಯವರೆಗೆ ಓದಿರುವ ಹೆಣ್ಣುಗಳ ಬದುಕಿನ ನಡಿಗೆಯ ಹೆಜ್ಜೆಗುರುತುಗಳು ಕಾಣುವುದರಿಂದ ಅವರು ಬೇರೆ ಅನ್ನಿಸದೇ, 'ನಾನೇ ಅವಳು ಅವಳೇ ನಾನು' ಅನ್ನಿಸುವ ಸಂಭವವೇ ಹೆಚ್ಚು.

ಪ್ರೀತಿ, ಪ್ರೇಮ, ಮದುವೆ ಎಲ್ಲದರ ಬಗೆಗೂ ಗೊಂದಲದಲ್ಲಿರುವ ಸಾವಿತ್ರಿ, ಮದುವೆ ಬೇಡವೇ ಬೇಡ, ಗಂಡಸಿನ ಪ್ರೇಮದ ಅಗತ್ಯವೇ ಇಲ್ಲ ಎನ್ನಲಾರಳು. ಹಾಗೆಂದು ಅಪ್ಪ ಅಮ್ಮ ತಂದು ನಿಲ್ಲಿಸಿದ ಡಾಕ್ಟರ್, ಲೆಕ್ಚರರ್, ಎಂಜಿನಿಯರ್ ವರಗಳಿಗೆ ಒಪ್ಪಿಗೆ ಸೂಚಿಸಿ ಮದುವೆಯಾಗಲಾರಳು. ಯಾಕವರನ್ನು